2015 ಕ.ತೀ.ವ 420

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎಲ್. ಮಂಜುನಾಥ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ್

ಡಾ: ಎ. ಇಬ್ರಾಹಿಂ ಖಲೀಲ್ ಮತ್ತು ಮತ್ತೊಬ್ಬರು –ವಿರುದ್ಧ– ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ರಿಟ್ ಅರ್ಜಿದಾರರು ಸರ್ಕಾರಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದು, ಸೇವೆಯಲ್ಲಿದ್ದಾಗಲೇ ಉನ್ನತ ವ್ಯಾಸಂಗವನ್ನು ಸರ್ಕಾರಿ ಖರ್ಚಿನಲ್ಲಿಯೇ ನಡೆಸುತ್ತಾರೆ. ಆದರೆ ಉನ್ನತ ವ್ಯಾಸಂಗವನ್ನು ಪೂರ್ಣಗೊಳಿಸಿದ ನಂತರ ತಮ್ಮನ್ನು ಸೇವೆಯಿಂದ ಮುಕ್ತಿಗೊಳಿಸಿ ಎರಡನೇ ಎದುರುದಾರ ಸಂಸ್ಥೆಯಲ್ಲಿ ಸೇವೆಗೆ ಸೇರಲು ಸರ್ಕಾರದ ಅನುಮತಿ ಕೋರಿದಾಗ ಸರ್ಕಾರವು ಸುಮಾರು ಲಕ್ಷ ರೂ.ಗಳಷ್ಟು ನೀಡುವಂತೆ ಬೇಡಿಕೆ ನೀಡುತ್ತದೆ. ಆ ಬೇಡಿಕೆಯ ಅಧಿಸೂಚನೆಯನ್ನು ರದ್ದುಗೊಳಿಸುವಂತೆ ಅರ್ಜಿದಾರರು ನ್ಯಾಯಾಧಿಕರಣದಲ್ಲಿ ಅರ್ಜಿ ಸಲ್ಲಿಸಲಾಗಿ, ಆ ಅರ್ಜಿಯು ವಜಾಗೊಂಡ ಸಂದರ್ಭದಲ್ಲಿ ಸದರಿ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

ಅರ್ಜಿದಾರರು ಉನ್ನತ ವ್ಯಾಸಂಗವನ್ನು ಸರ್ಕಾರಿ ಖರ್ಚಿನಲ್ಲಿ ಮಾಡಿ ಅದರಿಂದ ಹಲವಾರು ಪ್ರಯೋಜನಗಳನ್ನು ಪಡೆದಿದ್ದರೂ ಸಮಾಜ ಸೇವೆಯನ್ನು ಮಾಡದೇ ಸರ್ಕಾರವು ಅವರನ್ನು ಹೆಚ್ಚಿನ ವ್ಯಾಸಂಗವನ್ನು ತನ್ನ ಖರ್ಚಿನಲ್ಲಿ ಮಾಡಿದುದರ ದುರುಪಯೋಗವನ್ನು ಪಡೆಯುವ ಸಾಧ್ಯತೆಗಳಿವೆ. ವ್ಯಾಸಂಗವನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಅವರು ವೇತನವನ್ನೂ ಸಹ ಪಡೆದಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಅರ್ಜಿದಾರರ ರಿಟ್ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

(ಪ್ಯಾರಾ: 17 ರಿಂದ ಕಡೆಯವರೆಗೆ)

*ರಿಟ್ ಅರ್ಜಿ ಸಂ. 16882/2014 (ಎಸ್–ಕೆಎಟಿ), ದಿನಾಂಕ: 7ನೇ ಏಪ್ರಿಲ್, 2014.

ಅರ್ಜಿದಾರರ ಪರ : ಶ್ರೀ ಎ.ವಿ. ನಿಶಾಂತ್ – ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ಆರ್.ದೇವದಾಸ್ – ಎ.ಜಿ.ಎ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೆ.ಎಲ್. ಮಂಜುನಾಥ್:**

ಅರ್ಜಿದಾರರು, ಅರ್ಜಿ ಸಂ.7428–7429/2012 ರಲ್ಲಿ ದಿನಾಂಕ 22.10.2013ರಂದು ಕರ್ನಾಟಕ ಆಡಳಿತ ನ್ಯಾಯಾಧಿಕರಣ, ಬೆಂಗಳೂರು, ಮೂಲಕ ಇವರು ಮಾಡಿದ ಆದೇಶಗಳ ಕಾನೂನು ಸಮ್ಮತತೆ ಮತ್ತು ಸರಿತನವನ್ನು ಪ್ರಶ್ನಿಸಿದ್ದಾರೆ.

2. ಈ ರಿಟ್ ಅರ್ಜಿಗಳಿಗೆ ಕಾರಣವಾದ ಸಂಗತಿಗಳು, ಈ ಮುಂದಿನಂತಿವೆ: ಮೊದಲನೇ ರಿಟ್ ಅರ್ಜಿದಾರ – ಡಾ|| ಎ.ಇಬ್ರಾಹಿಂ ಖಲೀಲ್, 25.08.1993 ರಿಂದ ಪರಿಣಾಮಕಾರಿಯಾಗುವಂತೆ ಗುತ್ತಿಗೆ ಆಧಾರದ ಮೇಲೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯಾಗಿ ನೇಮಕಗೊಂಡಿದ್ದಾನೆ. ತದನಂತರ, ಆತನ ಸೇವೆಗಳನ್ನು 05.10.1999 ರಿಂದ ಪರಿಣಾಮಕಾರಿಯಾಗುವಂತೆ ಕ್ರಮಬದ್ಧಗೊಳಿಸಲಾಗಿದೆ. ತದನಂತರ, ಆತನ ಕೋರಿಕೆಯ ಮೇಲೆ ಸರ್ಕಾರವು ಆತನನ್ನು ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಬೆಂಗಳೂರಿನಲ್ಲಿ ದಿನಾಂಕ 17.09.2008 ಮತ್ತು 30.07.2011ರ ನಡುವೆ ವೈದ್ಯಕೀಯ ಗ್ರಂಥಿ ಶಾಸ್ತ್ರದ ಅಧ್ಯಯನಕ್ಕೆ ಸಂಬಂಧಿಸಿದ ಸೂಪರ್‌ಸ್ಪೆಷಾಲಿಟಿ ಕೋರ್ಸಿನಲ್ಲಿ ಸ್ನಾತಕೋತ್ತರ ಪದವಿಗಾಗಿ ಸೇವೆಯಲ್ಲಿರುವ ಅಭ್ಯರ್ಥಿಯಾಗಿ ಪ್ರತಿನಿಯೋಜಿಸಿದೆ. ಆತನಿಗೆ, ತನ್ನ ಶಿಕ್ಷಣದ ಅವಧಿಯಲ್ಲಿ ಅಧ್ಯಯನ ರಜೆ, ವೇತನವನ್ನು ನೀಡಲಾಗಿದೆ ಮತ್ತು ಅದೇ ಕಾಲೇಜಿಗೆ ಬೋಧನಾ ಶುಲ್ಕವನ್ನು ಸಹ ಸರ್ಕಾರದಿಂದ ಪಾವತಿಸಲಾಗಿದೆ. ಅರ್ಜಿದಾರನು ಪ್ರತಿನಿಯೋಜನೆ ನಿಯಮಗಳ ಪ್ರಕಾರ, ಆತನ ಅಗತ್ಯತೆಯನ್ನು ಪೂರೈಸಲು ವಿಫಲನಾದ ಸಂದರ್ಭದಲ್ಲಿ 5.00 ಲಕ್ಷ ರೂ.ಗಳ ದಂಡವನ್ನು ಪಾವತಿಸಲು ಮುಚ್ಚಳಿಕೆ ಬರೆದುಕೊಟ್ಟಿದ್ದನು.

3. 2ನೇ ಅರ್ಜಿದಾರ ಡಾ॥ಎಲ್.ಕೆ.ರಾಜೀವ್ ಸಹ ದಿನಾಂಕ 26.09.1994 ರಂದು ಗುತ್ತಿಗೆ ಆಧಾರದ ಮೇಲೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯಾಗಿ ನೇಮಕಗೊಂಡಿದ್ದಾನೆ. ಆತನ ಸೇವೆಗಳನ್ನು, ದಿನಾಂಕ 07.08.1997ರಿಂದ ಪರಿಣಾಮಕಾರಿಯಾಗುವಂತೆ ಕ್ರಮಬದ್ಧಗೊಳಿಸಲಾಗಿದೆ. ಆತನು ಕೋರಿರುವಂತೆ 2000ದ ಸೆಪ್ಟಂಬರ್ ತಿಂಗಳಿನಲ್ಲಿ ಪ್ರತಿನಿಯೋಜನೆ ಮೇಲೆ ಸ್ನಾತಕೋತ್ತರ ಪದವಿಗಾಗಿ ಕಳುಹಿಸಲಾಗಿದೆ. ಪುನ: ಮತ್ತೊಮ್ಮೆ ಆತನ ಕೋರಿಕೆಯ ಮೇಲೆ ದಿನಾಂಕ 11.06.2007 ಮತ್ತು 31.05.2010ರ ನಡುವೆ ಪ್ರತಿ ನಿಯೋಜನೆ ಮೇಲೆ ಸೂಪರ್ ಸ್ಪೆಷಾಲಿಟಿ ಕೋರ್ಸಿಗಾಗಿ ಕಳುಹಿಸಲಾಗಿದೆ. ಸ್ನಾತಕೋತ್ತರ ಪದವಿಗಾಗಿ ಆತನನ್ನು ಪ್ರತಿನಿಯೋಜನೆ ಮಾಡಿದಾಗ, ಎಲ್ಲಾ ಸೌಲಭ್ಯಗಳು ಸೇರಿದಂತೆ ಅಂದರೆ, ಅಧ್ಯಯನ ರಜೆ, ದಿನಭತ್ಯೆ, ಬೋಧನಾ ಶುಲ್ಕವನ್ನು ಸರ್ಕಾರದಿಂದ ಪಾವತಿಸಲಾಗಿದೆ. ಸೂಪರ್ ಸ್ಪೆಷಾಲಿಟಿ ಅಧ್ಯಯನಕ್ಕೆ ಆತನಿಗೆ ಪ್ರತಿನಿಯೋಜನೆಯಷ್ಟರ ಮಟ್ಟಿಗೆ ಮಂಜೂರಾತಿ ನೀಡಲಾಗಿದೆ. ವೇತನ ಅಥವಾ ಭತ್ಯೆಯನ್ನು, ಪ್ರತಿ ನಿಯೋಜನೆಯ ಎರಡನೇ ಅವಧಿಯಲ್ಲಿ ಪಾವತಿಸಿರುವುದಿಲ್ಲ. ಆದಾಗ್ಯೂ, ಬೋಧನಾ ಶುಲ್ಕವನ್ನು, 2ನೇ ಅರ್ಜಿದಾರನ ಪರವಾಗಿ ಸರ್ಕಾರದಿಂದ ಪಾವತಿಸಲಾಗಿದೆ.

4. ತಮ್ಮ ಸೂಪರ್‌ಸ್ಪೆಷಾಲಿಟಿ ಕೋರ್ಸನ್ನು ಪೂರ್ಣಗೊಳಿಸಿದ ತರುವಾಯ ರಿಟ್ ಅರ್ಜಿದಾರರು, ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. 2ನೇ ಅರ್ಜಿದಾರನು ಸಹ, ಪ್ರತಿನಿಯೋಜನೆ ನಿಯಮಗಳಿಗೆ ಅನುಸಾರವಾಗಿ ಮುಚ್ಚಳಿಕೆ ಬರೆದುಕೊಟ್ಟಿದ್ದಾನೆ. ಸೂಪರ್‌ಸ್ಪೆಷಾಲಿಟಿ ಕೋರ್ಸನ್ನು ಪೂರ್ಣಗೊಳಿಸಿದ ತರುವಾಯ ತಮ್ಮ ಪ್ರಯೋಜನಕ್ಕಾಗಿ ಅರ್ಜಿದಾರರು ಉತ್ತಮ ಹುದ್ದೆ ಮತ್ತು ಹೆಚ್ಚು ವೇತನ ಪಡೆದುಕೊಳ್ಳಲು, 2ನೇ ಪ್ರತ್ಯರ್ಜಿದಾರ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಬೆಂಗಳೂರಿನಲ್ಲಿ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ. 2ನೇ ಪ್ರತ್ಯರ್ಜಿದಾರರಿಂದ ಹೊರಡಿಸಿದ ಅಧಿಸೂಚನೆಗೆ ಅನುಸಾರವಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಅರ್ಜಿದಾರರಾದ ಅವರು ಕರ್ನಾಟಕ ಸರ್ಕಾರದ ಖಾಯಂ ನೌಕರರಾಗಿರುವುದರಿಂದ, 2ನೇ ಪ್ರತ್ಯರ್ಜಿದಾರ – ಸಂಸ್ಥೆಯಲ್ಲಿ ನೇಮಕಾತಿಗಾಗಿ ಅರ್ಜಿಯನ್ನು ಹಾಕಲು ತಮ್ಮ ನಿಯೋಜಕರಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್.ಓ.ಸಿ) ವನ್ನು

ಕೋರಿದ್ದಾರೆ. ಅನುಮತಿ ನೀಡದ ಕಾರಣದ ಮೇಲೆ ಮತ್ತೆ ರಿಟ್ ಅರ್ಜಿದಾರರಾದ, 1ನೇ ಅರ್ಜಿದಾರರಿಂದ, 32,64,971/– ರೂಪಾಯಿಗಳ ಮೊತ್ತವನ್ನು ಹಾಗೂ 2ನೇ ಅರ್ಜಿದಾರರಿಂದ, 29,89,437/– ರೂಪಾಯಿಗಳನ್ನು ಪಾವತಿಸುವಂತೆ ತಗಾದೆ ಮಾಡಿದ ಕಾರಣದಿಂದ, ಅರ್ಜಿದಾರರ ಸಂಬಂಧದಲ್ಲಿ ಕರ್ನಾಟಕ ಸರ್ಕಾರ ತಗಾದೆ ಮಾಡಿದ್ದು, ಕಾನೂನು ದೃಷ್ಟಿಯಿಂದ ದೋಷಪೂರ್ಣವಾಗಿದೆ ಮತ್ತು ಅವರು ಅವರಿಂದ ಮುಚ್ಚಳಿಕೆ ಬರೆದುಕೊಟ್ಟ ದೃಷ್ಟಿಯಿಂದ, 5.00 ಲಕ್ಷ ರೂಪಾಯಿಗಳ ದಂಡವನ್ನು ಪಾವತಿಸಲು ಸಿದ್ಧವಿರುವುದಾಗಿಯೂ ತಿಳಿಸಿ, ಆದ್ದರಿಂದ ಸರ್ಷಿಯೋರರಿ ಸ್ವರೂಪದಲ್ಲಿ ರಿಟ್‌ನ್ನು ನೀಡುವ ಮೂಲಕ ಕರ್ನಾಟಕ ಸರ್ಕಾರ ಹೊರಡಿಸಿದ ಅಧಿಸೂಚನೆಯನ್ನು ರದ್ದುಪಡಿಸಲು ನ್ಯಾಯಾಧಿಕರಣವನ್ನು ಕೋರಿ ಅರ್ಜಿಯನ್ನು ದಾಖಲು ಮಾಡಿದ್ದಾರೆ ಮತ್ತು 5.00 ಲಕ್ಷ ರೂಪಾಯಿಗಳ ಸಂದಾಯದ ಮೇಲೆ ಅವರ ಸೇವೆಗಳಿಂದ ಅವರನ್ನು ಬಿಡುಗಡೆ ಮಾಡುವಂತೆ 2ನೇ ಪ್ರತ್ಯರ್ಜಿದಾರರ ಬಳಿ ನೇಮಕಾತಿ ಸಾಧ್ಯವಾಗುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಲು ಕೋರಿದ್ದಾರೆ.

5. ಸರ್ಕಾರವು, ನ್ಯಾಯಾಧಿಕರಣದ ಮುಂದೆ ವಿವರವಾದ ಹೇಳಿಕೆಯನ್ನು ದಾಖಲು ಮಾಡಿದೆ. ಉನ್ನತ ಅರ್ಹತೆಯನ್ನು ಪಡೆದುಕೊಳ್ಳಲು ತನ್ನ ನೌಕರರನ್ನು ಪ್ರತಿನಿಯೋಜನೆ ಅವಧಿಯ ಸಮಯದಲ್ಲಿ ವೇತನ, ಭತ್ಯೆ ಮತ್ತು ಬೋಧನಾ ಶುಲ್ಕವನ್ನು ಪಾವತಿಸುವ ಮೂಲಕ ಸರ್ಕಾರದ ವೆಚ್ಚಗಳಲ್ಲಿ ಉನ್ನತ ಅಧ್ಯಯನಕ್ಕಾಗಿ ಪ್ರತಿನಿಯೋಜನೆ ಮೇಲೆ ಸೇವೆಯಲ್ಲಿರುವ ಅಭ್ಯರ್ಥಿಗಳನ್ನು ಕಳುಹಿಸುವ ಕರ್ನಾಟಕ ಸರ್ಕಾರದ ಗುರಿ ಮತ್ತು ಉದ್ದೇಶವು ರಾಜ್ಯದ ಸಾಮಾನ್ಯ ಮನುಷ್ಯನಿಗೆ ಸೇವೆ ಸಲ್ಲಿಸಲು ಅನುಕೂಲ ಮಾಡಿಕೊಡುವುದಾಗಿದೆ. ಸರ್ಕಾರದ ಸೇವೆಗಳನ್ನು ಬಿಡಲು ಅವರು ಇಚ್ಛಿಸಿದ್ದಲ್ಲಿ, 5.00 ಲಕ್ಷ ರೂ.ಗಳ ಮೊತ್ತದಂತೆ ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದು ಕೇವಲ ದಂಡ ಮಾತ್ರವಾಗಿದ್ದು, ಆದರೆ 5.00 ಲಕ್ಷ ರೂ.ಗಳ ದಂಡದ ರೂಪದಲ್ಲಿ ಅರ್ಜಿದಾರರಾದ ಅವರು, ಅದನ್ನು ಪಾವತಿಸಲು ಹೊಣೆಗಾರನಾಗಿರುವುದಿಲ್ಲವೆಂದು ವಾದಿಸುವುದಕ್ಕೆ ಅನುಮತಿ ನೀಡಲಾಗದೆಂದು ಮುಂದುವರೆದು ವಾದಿಸಲಾಗಿದೆ. ಉನ್ನತ ವಿದ್ಯಾರ್ಹತೆಯನ್ನು ಪಡೆದುಕೊಳ್ಳಲು ಸರ್ಕಾರವು ಅವರ ಮೇಲೆ ಹಣವನ್ನು ವ್ಯಯಿಸಿದೆಯೆಂದೂ ಸಹಾ ವಾದಿಸಿದೆ.

6. 1ನೇ ಅರ್ಜಿದಾರನಿಗೆ ಸಂಬಂಧಿಸಿದಷ್ಟರ ಮಟ್ಟಿಗೆ, ಆತನು ಸ್ನಾತಕೋತ್ತರ ಪದವಿ ಪಡೆದುಕೊಳ್ಳಲು ಸೇವೆಯಲ್ಲಿರುವ ಅಭ್ಯರ್ಥಿಯಾಗಿ ಪ್ರತಿ ನಿಯೋಜನೆಯಲ್ಲಿರುವಾಗ, 8,57,012.00 ರೂ.ಗಳ ವೇತನವನ್ನು ಸ್ವೀಕರಿಸಿದ್ದಾನೆಯೆಂದು ಸರ್ಕಾರದಿಂದ ವಾದಿಸಲಾಗಿದೆ. ಆತನು, ಸೇವೆಯಲ್ಲಿರುವ ಅಭ್ಯರ್ಥಿಯಾಗಿ ಪ್ರತಿನಿಯೋಜನೆಯ ಸೌಲಭ್ಯವಾಗಿ, 1,08,211/- ರೂ.ಗಳ ಮೊತ್ತವನ್ನು ಸಹ ಪ್ರಯೋಜನವಾಗಿ ಪಡೆದುಕೊಂಡಿದ್ದಾನೆ. ಸರ್ಕಾರವು, ಬೋಧನಾ ಶುಲ್ಕಕ್ಕಾಗಿ, 60,000/- ರೂ.ಗಳನ್ನು ಪಾವತಿಸಿದೆ ಮತ್ತು ಆತನು, 5.00 ಲಕ್ಷ ರೂ.ಗಳ ದಂಡ ಪಾವತಿಸಬೇಕಾಗಿದೆ. ಒಟ್ಟಾರೆ, 15,25,223/- ರೂ.ಗಳ ಮೊತ್ತವಾಗಿದೆ. ಹೆಚ್ಚು ಅರ್ಹತೆಯನ್ನು ಪಡೆದುಕೊಳ್ಳುವ ಏಕೈಕ ಉದ್ದೇಶದೊಂದಿಗೆ ಮೊದಲನೇ ಪ್ರತ್ಯರ್ಜಿದಾರನಿಗೆ ಸಾಧ್ಯವಾಗುವಂತೆ ಸರ್ಕಾರದಿಂದ ಖರ್ಚು ಮಾಡಲಾಗಿದೆ ಮತ್ತು ಕರ್ನಾಟಕ ರಾಜ್ಯದ ಆಸ್ಪತ್ರೆಗಳಲ್ಲಿ ಅದರ ಪ್ರಯೋಜನವನ್ನು ಬಳಕೆ ಮಾಡಬಹುದೆಂದು ಪ್ರತಿನಿಯೋಜನೆ ಮೇಲೆ ತನ್ನ ನೌಕರರಿಗೆ ಖರ್ಚು ಮಾಡಿದೆ, ಆ ಮೊತ್ತದ ಖರ್ಚಿನ ಮೇಲೆ 12% ಬಡ್ಡಿ ದರವನ್ನೂ ಪಾವತಿಸುವಂತೆ ಸಹ ಸರ್ಕಾರ ತಗಾದೆ ಮಾಡಿದೆ. ಹಾಗಾಗಿ, 29,89,437/- ರೂ.ಗಳ ಒಟ್ಟು ಮೊತ್ತವನ್ನು ಮೊದಲನೇ ಅರ್ಜಿದಾರನು ಪಾವತಿಸುವಂತೆ ತಗಾದೆ ಮಾಡಿದೆ.

7. ಹಾಗೆಯೇ, ಎರಡನೇ ಅರ್ಜಿದಾರನಿಗೆ ಸಂಬಂಧಿಸಿದಂತೆ, ಪ್ರತಿನಿಯೋಜನೆಯ ಕೋರ್ಸು ಅವಧಿಯಲ್ಲಿ ಆತನ ಇಡೀ ವೇತನ ಮತ್ತು ದಿನ ಭತ್ಯೆ ಸಲುವಾಗಿ 7,45,739/- ರೂ.ಗಳ ಮೊತ್ತವನ್ನು ಖರ್ಚು ಮಾಡಲಾಗಿದ್ದು, ಮೂರು ವರ್ಷಗಳ ಅವಧಿಯಲ್ಲಿ ಎರಡನೇ ಅರ್ಜಿದಾರನಿಗೆ ಬೋಧನಾ ಶುಲ್ಕಕ್ಕಾಗಿ 6,52,500/- ರೂ.ಗಳನ್ನು ಖರ್ಚು ಮಾಡಿದೆ ಮತ್ತು ನಿಬಂಧನೆಗಳಲ್ಲಿರುವಂತೆ 5.00 ಲಕ್ಷ ರೂ.ಗಳ ದಂಡದ ಮುಚ್ಚಳಿಕೆಯನ್ನು ಅವನಿಂದ ಬರೆದುಕೊಡಲಾಗಿದೆ ಮತ್ತು ವಾರ್ಷಿಕ 12% ದರದಲ್ಲಿ ಬಡ್ಡಿಯನ್ನು ಸೇರಿಸಿ, ಒಟ್ಟಾರೆಯಾಗಿ, 32,64,971/- ರೂಗಳ ಮೊತ್ತಕ್ಕೆ ಎರಡನೇ ಅರ್ಜಿದಾರನಿಗೆ ತಗಾದೆ ಮಾಡಲಾಗಿದೆ.

8. ತಮ್ಮ ಉನ್ನತ ಅರ್ಹತೆಯನ್ನು ಪರಿಗಣಿಸಿದಲ್ಲಿ, ರಾಜ್ಯದ ಆಸ್ಪತ್ರೆಗಳಲ್ಲಿ ತತ್ಸಮಾನವಾದ ಹುದ್ದೆಯಿಲ್ಲವೆಂಬ ರಿಟ್ ಅರ್ಜಿದಾರರ ವಾದವು ಸರಿಯಾದುದಲ್ಲವೆಂದೂ ಸಹ ಸರ್ಕಾರ ವಾದಿಸಿದೆ. ಅದರ ಆಕ್ಷೇಪಣೆಗಳು ಪ್ಯಾರಾ–12 ರಲ್ಲಿ ಸರ್ಕಾರದ ಅನುಸಾರವಾಗಿ, ಭಾರತ ಸರ್ಕಾರವು ಸೋಂಕು ರೋಗಗಳಲ್ಲದ ಮತ್ತು ಕ್ಯಾನ್ಸರ್‌ಗಳ ನಿಯಂತ್ರಣಕ್ಕೆ ರಾಷ್ಟ್ರೀಯ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು ಇದರಡಿಯಲ್ಲಿ ಮೊದಲನೇ ಹಂತದಲ್ಲಿ ಬಾಯಿ ಕ್ಯಾನ್ಸರ್, ಎದೆ ಕ್ಯಾನ್ಸರ್, ಕುತ್ತಿಗೆ ಕ್ಯಾನ್ಸರ್‌ಗೆ ಸಂಬಂಧಪಟ್ಟಂತೆ, ತುಮಕೂರು, ಶಿವಮೊಗ್ಗ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರಮುಖ ಗಮನ ನೀಡಬೇಕಾಗಿದೆಯೆಂದು ಸ್ಪಷ್ಟವಾಗಿ ವಾದಿಸಿದ್ದಾರೆ. ಮೇಲಿನ ಕ್ಯಾನ್ಸರ್‌ಗಳು ಮತ್ತು ರೋಗ ನಿರ್ಣಯ ಪ್ರಕರಣಗಳಿಗಾಗಿ ರೋಗ–ವಿಧಾನ ಪರೀಕ್ಷೆ ಕ್ಯಾಂಪ್‌ಗಳನ್ನು ನಡೆಸಲು ಕಿದ್ವಾಯಿಯೊಂದಿಗೆ ಸಹಿ ಮಾಡಿದ್ದು, ಕಿದ್ವಾಯಿಯಲ್ಲಿ ವೈದ್ಯೋಪಚಾರ ನೀಡಲಾಗುವುದು. ಕ್ಯಾನ್ಸರ್ ಪೀಡಿತ ಬಡ ರೋಗಿಗಳಿಗೆ ಸೇವೆಯನ್ನು ಸಲ್ಲಿಸುವ ಮಹತ್ವವುಳ್ಳ ದೀರ್ಘಾವಧಿಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಮುಖ ಕಾರ್ಯಕ್ರಮವಾಗಿರುವುದರಿಂದ, ಆಂಕಾಲಜಿ ತಜ್ಞರ ಸೇವೆಗಳು ಇಲಾಖೆಗೆ ಅಗತ್ಯವಾಗಿದೆ. ಈ ರೋಗಿಗಳನ್ನು ತರುವಾಯದಲ್ಲಿ, ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಸಂಸ್ಥೆಯಲ್ಲಿ ಚಿಕಿತ್ಸೆಗೊಳಪಡಿಸಲಾಗುವುದು.

9. ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಮುಖ ಕಾರ್ಯಕ್ರಮ ಯೋಜನೆಯಾಗಿರುವುದರಿಂದ, ಕ್ಯಾನ್ಸರ್ ಮತ್ತು ಅಂಥ ಇತರೇ ಸಂಬಂಧಿತ ರೋಗಗಳಿಂದ ನರಳುತ್ತಿರುವ ಬಡಜನರಿಗೆ ಸೇವೆ ಸಲ್ಲಿಸಲಾಗುತ್ತಿದೆಯೆಂದು ವಾದಿಸಲಾಗಿದೆ. ಆದ್ದರಿಂದ, ಆಂಕಾಲಜಿ ತಜ್ಞರ ಸೇವೆಗಳು ರಾಜ್ಯಕ್ಕೆ ಅಗತ್ಯವಾಗಿದೆ. ಹಾಗಾಗಿ, ಅರ್ಜಿದಾರರು, ಸರ್ಕಾರದ ವೆಚ್ಚಗಳಲ್ಲಿ ಆಂಕಾಲಜಿಯ ಸೂಪರ್‌ಸ್ಪೆಷಾಲಿಟಿ ಕೋರ್ಸಿನಲ್ಲಿ ಉನ್ನತ ಅರ್ಹತೆ ಪಡೆದುಕೊಂಡು ಆಂಕಾಲಜಿಯಲ್ಲಿ ತಜ್ಞರಾಗಿದ್ದು ಇಲಾಖೆಯಲ್ಲಿ ಕಾರ್ಯನಿರ್ವಹಿಸಲು ಬದ್ಧರಾಗಿರುವುದು ಮತ್ತು ಅವರು ತಮ್ಮ ವೈಯಕ್ತಿಕ ಪ್ರಯೋಜನಗಳಿಗಾಗಿ 5.00 ಲಕ್ಷ ರೂ.ಗಳ ದಂಡವನ್ನು ಸಂಗ್ರಹಿಸಿಕೊಂಡು

ನಿರಾಪೇಕ್ಷಣಾ ಪ್ರಮಾಣ ಪತ್ರ (ಎನ್.ಓ.ಸಿ) ನೀಡಬೇಕೆಂದು ಸರ್ಕಾರವನ್ನು ಕೇಳಲಾಗದು.

10. ಉನ್ನತ ಅರ್ಹತೆಗಳನ್ನು ಪಡೆದುಕೊಳ್ಳಲು 10.00 ಲಕ್ಷ ರೂ.ಗಳಿಂದ 12.00 ಲಕ್ಷ ರೂ.ಗಳಿಗಿಂತ ಹೆಚ್ಚಾಗಿ ಪ್ರತಿಯೊಬ್ಬ ಅರ್ಜಿದಾರರಿಗೆ ಸರ್ಕಾರ ಖರ್ಚು ಮಾಡಿರುವಾಗ, 5.00 ಲಕ್ಷ ರೂ.ಗಳ ಮೊತ್ತದಂತೆ ದಂಡವನ್ನು ಸಂಗ್ರಹಿಸಿಕೊಂಡು, ನಿರಾಪೇಕ್ಷಣಾ ಪ್ರಮಾಣ ಪತ್ರ (ಎನ್.ಓ.ಸಿ) ನೀಡಲು ಅರ್ಜಿದಾರರು ಒತ್ತಾಯಿಸಬಾರದೆಂದು ಸಹ ಸರ್ಕಾರದಿಂದ ವಾದಿಸಲಾಗಿದೆ. ಅರ್ಜಿದಾರರು, ಉನ್ನತ ಅರ್ಹತೆಯನ್ನು ಪಡೆದುಕೊಳ್ಳಲು ಸರ್ಕಾರದ ಆಡಳಿತ ಯಂತ್ರವನ್ನು ಬಳಸಿಕೊಂಡು, ಸರ್ಕಾರಕ್ಕೆ ಸೇವೆಯನ್ನು ಸಲ್ಲಿಸುವ ಬದಲಾಗಿ ಈಗ 5.00 ಲಕ್ಷ ರೂಪಾಯಿಗಳ ಅತ್ಯಲ್ಪ ದಂಡವನ್ನು ಪಾವತಿಸುವ ಮೂಲಕ, ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್.ಓ.ಸಿ) ನೀಡುವುದಕ್ಕೆ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆಂದು ಸಹ ವಾದಿಸಲಾಗಿದೆ. ಸರ್ಕಾರವು ಭಾರೀ ಹಣವನ್ನು ಖರ್ಚು ಮಾಡಿರುವಾಗ ದಂಡವನ್ನು ಸಂಗ್ರಹಿಸಿ, ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್.ಓ.ಸಿ)ವನ್ನು ನೀಡಬಾರದೆಂದು ಮುಂದುವರೆದು ವಾದಿಸಲಾಗಿದೆ. ಈ ಸಂದರ್ಭಗಳಲ್ಲಿ ಸರ್ಕಾರವು, ಈ ಅರ್ಜಿಗಳನ್ನು ವಜಾಗೊಳಿಸಲು ನ್ಯಾಯಾಧಿಕರಣವನ್ನು ಕೋರಿದೆ.

11. ನ್ಯಾಯಾಧಿಕರಣವು, ಉಭಯ ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಯವರ ಅಹವಾಲನ್ನು ಆಲಿಸುವ ಮೂಲಕ ಒಂದು ನಿರ್ಣಯಕ್ಕೆ ಬಂದಿದೆ; ಅರ್ಜಿದಾರರನ್ನು, ಉನ್ನತ ಅರ್ಹತೆ ಪಡೆದುಕೊಳ್ಳಲು ಪ್ರತಿನಿಯೋಜನೆ ಮೇಲೆ ಕಳುಹಿಸಲಾಗಿದೆ ಮತ್ತು ಅವರ ಉನ್ನತ ಅಧ್ಯಯನದ ಸಮಯದಲ್ಲಿ, ಅರ್ಜಿದಾರರಿಗೆ ವೇತನ ಪಾವತಿಸುವುದರ ಮೂಲಕ ಅವರ ಹುದ್ದೆಗಳನ್ನು ಖಾಲಿ ಇಟ್ಟುಕೊಂಡಿದೆ. ಆದರೆ ರಾಜ್ಯ ಸರ್ಕಾರವು, ಪರ್ಯಾಯವಾಗಿ, ಇತರೇ ವೈದ್ಯರನ್ನು ಬಳಸಿಕೊಂಡು ಅವರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬಹುದಾಗಿತ್ತು. ವೈದ್ಯಾಧಿಕಾರಿಗಳ ಪ್ರತಿನಿಯೋಜನೆಯ ಕಾರ್ಯಕ್ರಮವು, ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಬಡರೋಗಿಗಳಿಗಾಗಿ, ಹತ್ತು ವರ್ಷಗಳ ಅವಧಿಯ ಅವರ ಸೇವೆ ಬಳಸಿಕೊಳ್ಳಲು

ಉತ್ತಮ ಜ್ಞಾನದೊಂದಿಗೆ ಅವರನ್ನು ಸಜ್ಜುಗೊಳಿಸಲಾಗಿದೆ ಮತ್ತು ಇದು, ಆಶ್ರಯ ಯೋಜನೆಯೋ ಅಥವಾ ಸರ್ಕಾರ ಬಡಜನರಿಗೆ 1 ರೂಪಾಯಿಗೆ ಕೆ.ಜಿ. ಅಕ್ಕಿಯನ್ನು ಒದಗಿಸುವ ಯೋಜನೆಯಂಥ ಯೋಜನೆಯಾಗಿರುವುದಿಲ್ಲವೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟಿದೆ. ಅದಕ್ಕನುಸಾರವಾಗಿ, ನ್ಯಾಯಾಧಿಕರಣವು, ಅರ್ಜಿದಾರರಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್.ಓ.ಸಿ) ಅಗತ್ಯವಿದ್ದ ಸಂದರ್ಭದಲ್ಲಿ ಖರ್ಚು ಮಾಡಿದ ಆ ಮೊತ್ತವನ್ನು ವಸೂಲು ಮಾಡಲು ಸರ್ಕಾರ ಒತ್ತಾಯಪಡಿಸುವ ಅಭಿಪ್ರಾಯದೊಂದಿಗೆ ಅರ್ಜಿದಾರರು ದಾಖಲು ಮಾಡಿದ ಅರ್ಜಿಗಳನ್ನು ಈ ಮೂಲಕ ವಿಲೇ ಮಾಡಲಾಗಿದೆ. ನ್ಯಾಯಾಧಿಕರಣದ ಆದೇಶದಿಂದ ಬಾಧಿತರಾಗಿ ಪ್ರಸ್ತುತ ರಿಟ್ ಅರ್ಜಿಯನ್ನು ದಾಖಲು ಮಾಡಲಾಗಿದೆ.

12. ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ನಿಶಾಂತ್ ಮತ್ತು ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರ ವಾದಗಳನ್ನು ಆಲಿಸಲಾಗಿದೆ.

13. ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯುವರ ಅನುಸಾರವಾಗಿ ಸರ್ಕಾರವು, ಅರ್ಜಿದಾರರಿಂದ ಮುಚ್ಚಳಿಕೆಯನ್ನು ಬರೆಸಿಕೊಂಡ ದೃಷ್ಟಿಯಿಂದ ಪ್ರತಿಯೊಬ್ಬ ಅರ್ಜಿದಾರರಿಂದ ದಂಡವಾಗಿ 5.00 ಲಕ್ಷ ರೂ.ಗಳನ್ನು ಪಾವತಿಸಿಕೊಂಡು ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್.ಓ.ಸಿ) ನೀಡುವುದರ ಬದಲಾಗಿ ಖರ್ಚು ಮಾಡಿದ ಆ ಮೊತ್ತಕ್ಕೆ ಹಕ್ಕನ್ನು ಹೊಂದಿರುವುದಿಲ್ಲವೆಂಬುದಾಗಿದೆ. ಅರ್ಜಿದಾರರು, ಮುಚ್ಚಳಿಕೆಯ ನಿಬಂಧನೆಗಳಲ್ಲಿರುವಂತೆ ದಂಡವಾಗಿ 5.00 ಲಕ್ಷ ರೂ.ಗಳ ಮೊತ್ತವನ್ನು ಪಾವತಿಸಲು ಸಮ್ಮತಿಸಿದ್ದು, ನ್ಯಾಯಾಧಿಕರಣ ಮಾಡಿದ ಆದೇಶವನ್ನು ರದ್ದುಗೊಳಿಸಲು ಅಥವಾ ಮಾರ್ಪಾಡುಗೊಳಿಸಲು ಈ ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆಯೆಂದು ನಿವೇದಿಸಿದ್ದಾರೆ. ಇವರ ಪ್ರಕಾರ, ಕೆ.ಸಿ.ಎಸ್.ಆರ್. ನಿಯಮಗಳ ಮೇರೆಗೆ ಸರ್ಕಾರವು, ಪ್ರತಿನಿಯೋಜನೆ ಮೇಲೆ ಅರ್ಜಿದಾರರ ಶಿಕ್ಷಣಕ್ಕಾಗಿ ಖರ್ಚು ಮಾಡಿದ ಆ ಮೊತ್ತವನ್ನು ಒತ್ತಾಯಿಸುವುದಕ್ಕೆ ಶಕ್ತವಾಗುವುದಿಲ್ಲ. ಪ್ರತಿನಿಯೋಜನೆಯ ಅವಧಿಯ ಸಮಯದಲ್ಲಿ ಅರ್ಜಿದಾರರಾದ ಅವರಿಗೆ ಪಾವತಿಸಲಾದ ವೇತನ ಅಥವಾ ಭತ್ಯೆಗಳನ್ನು ಹಿಂತಿರುಗಿಸುವಂತೆ ಒತ್ತಾಯಿಸುವುದಕ್ಕೆ ಸರ್ಕಾರಕ್ಕೆ

ಕೆ.ಸಿ.ಎಸ್.ಆರ್. ಅಡಿಯಲ್ಲಿ ಯಾವುದೇ ಉಪಬಂಧವಿಲ್ಲವೆಂದೂ ಸಹ ಆತನು ವಾದಿಸಿದ್ದಾನೆ. ಉನ್ನತ ಅರ್ಹತೆ ಪಡೆದುಕೊಂಡಿರುವ ಅರ್ಜಿದಾರರಿಗೆ ಯೋಗ್ಯವಾದ ಹುದ್ದೆಗಳು ರಾಜ್ಯ ಸರ್ಕಾರದಲ್ಲಿ ಲಭ್ಯವಿಲ್ಲವೆಂದು ಸಹ ಆತನು ವಾದವನ್ನು ಮಂಡಿಸಿದ್ದಾನೆ. ಈ ಸಂದರ್ಭಗಳಲ್ಲಿ, ರಿಟ್ ಅರ್ಜಿಯನ್ನು ಅಂಗೀಕರಿಸುವಂತೆ ಈ ನ್ಯಾಯಾಲಯಕ್ಕೆ ಆತನು ಮನವಿ ಮಾಡಿದ್ದಾನೆ.

14. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಯವರ ವಾದಗಳು ಸಮರ್ಥನೀಯವಲ್ಲವೆಂದು ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಶ್ರೀ ದೇವದಾಸ ನಿವೇದಿಸಿದ್ದಾರೆ. ಸರ್ಕಾರಿ ನೌಕರನು ನೇಮಕಾತಿ ತರುವಾಯದ ಹತ್ತು ವರ್ಷಗಳ ಅವಧಿಯ ಸರ್ಕಾರಿ ಸೇವೆ ಸಲ್ಲಿಸದೇ ತನ್ನ ಹಕ್ಕಿನಂತೆ ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್.ಓ.ಸಿ) ವನ್ನು ಕೋರಲಾಗದಿರುವುದರಿಂದ ಸರ್ಕಾರವು, ಸಾಮಾನ್ಯ ಮನುಷ್ಯನ ಉಪಯೋಗಕ್ಕಾಗಿ ಅರ್ಜಿದಾರರು ಪಡೆದುಕೊಂಡ ಉನ್ನತ ಅರ್ಹತೆಯನ್ನು ಬಳಕೆ ಮಾಡಿಕೊಳ್ಳಲು ಮಾತ್ರ ಉನ್ನತ ಅಧ್ಯಯನಕ್ಕಾಗಿ ತನ್ನ ನೌಕರರನ್ನು ಕಳುಹಿಸಿದೆ. ಕ್ಯಾನ್ಸರ್ ಮತ್ತು ಅಂಥ ಇತರೇ ಅಪಾಯಕಾರೀ ರೋಗಗಳಿಂದ ಬಳಲುತ್ತಿರುವ ಬಡಜನರಿಗೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯದ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುವುದಕ್ಕೆ ಉನ್ನತ ಅರ್ಹತೆಯನ್ನು ಪಡೆದುಕೊಂಡಿರುವ ಅಂಥ ವೈದ್ಯರನ್ನು ಸರ್ಕಾರ ಬಳಕೆ ಮಾಡಿಕೊಳ್ಳಲಿದ್ದು, ಅದರ ಬದಲಾಗಿ, ಉನ್ನತ ಅರ್ಹತೆಯನ್ನು ಪಡೆದುಕೊಳ್ಳಲು ಮಾತ್ರ ಪ್ರತಿನಿಯೋಜನೆ ಮೇಲೆ ತನ್ನ ನೌಕರರನ್ನು ಕಳುಹಿಸಲು ಸರ್ಕಾರ ಬದ್ಧವಾಗಿದೆಯೆಂದು ಅರ್ಜಿದಾರರು ವಾದಿಸಲಾಗದು. ಮುಂದುವರೆದು, ಅವರು ಪಡೆದುಕೊಂಡ ಉತ್ತಮ ಜ್ಞಾನ ಮತ್ತು ಉನ್ನತ ಅರ್ಹತೆಗಳು ಹಾಗೂ ತಮ್ಮ ಪರಿಣಿತತೆಯು ಸಾಮಾನ್ಯ ಮನುಷ್ಯನಿಗೆ ವೈದ್ಯೋಪಚಾರ ನೀಡುವುದಕ್ಕೆ ಉಪಯೋಗವಾಗಲಿ ಎಂದು ಪ್ರತಿನಿಯೋಜನೆ ಮೇಲೆ ಅವರನ್ನು ಕಳುಹಿಸುವುದು ಉದ್ದೇಶವಾಗಿದೆಯೆಂದು ವಾದಿಸಿದ್ದಾರೆ. ರಾಜ್ಯದಲ್ಲಿನ ಜನತೆಗೆ ವೈದ್ಯಕೀಯ ಸೌಲಭ್ಯಗಳನ್ನು ಹೀಗೆ ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ. ಸರ್ಕಾರದ ಉದ್ದೇಶವು, ಉನ್ನತ ಅರ್ಹತೆಗಳನ್ನು ಪಡೆದುಕೊಳ್ಳಲು ಸರ್ಕಾರದ ವೆಚ್ಚಗಳಲ್ಲಿ ತನ್ನ ವೈದ್ಯರಿಗೆ ಶಿಕ್ಷಣ ನೀಡುವುದು ಅವರು ಬಡ ಜನರಿಗೆ ಸೇವೆ

ಸಲ್ಲಿಸುವುದಕ್ಕಾಗಿಯೆಂದು ಅವರು ಮುಂದುವರೆದು ವಾದಿಸಿದ್ದಾರೆ. ಉನ್ನತ ಅರ್ಹತೆಯನ್ನು ಪಡೆದುಕೊಳ್ಳಲು ತಮ್ಮ ಮಕ್ಕಳನ್ನು ಕಳುಹಿಸಿದ ತಂದೆ ತಾಯಿಗಳಂತೆ ಮತ್ತು ತದನಂತರ ತಮ್ಮ ವೈಯಕ್ತಿಕ ಲಾಭಗಳಿಗಾಗಿ ಯಾವುದೇ ಉದ್ಯೋಗವನ್ನು ಬದಲಾಯಿಸಿಕೊಳ್ಳಲು ಅವರಿಗೆ ಸಾಧ್ಯವಾಗುವಂತೆ ಅರ್ಜಿದಾರರು ಸರ್ಕಾರವನ್ನು ಭಾವಿಸಬಾರದೆಂದು ಸಹ ವಾದಿಸಿದ್ದಾರೆ. ಮುಚ್ಚಳಿಕೆ ಮೇರೆಗೆ ಒತ್ತಾಯಿಸಿದ 5.00 ಲಕ್ಷ ರೂ.ಗಳ ದಂಡ, ಅವರು, ಪ್ರತಿ ನಿಯೋಜನೆ ಮೇಲೆ ಇರುವಾಗ ಖರ್ಚು ಮಾಡಿದ ಆ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಸರ್ಕಾರವು ಭಯ ಹುಟ್ಟಿಸಿಲ್ಲವೆಂದು ಮುಂದುವರೆದು ವಾದಿಸಿದ್ದಾರೆ. ಆದ್ದರಿಂದ, ಈ ಅರ್ಜಿಗಳನ್ನು ವಜಾಗೊಳಿಸಲು ಅವರು ಕೋರಿದ್ದಾರೆ.

15. ತಮ್ಮ ಉನ್ನತ ಅರ್ಹತೆಗೆ ಯೋಗ್ಯವೆಂದು ಭಾವಿಸಲಾದ ತತ್ಸಮಾನವಾದ ಹುದ್ದೆಗಳು ರಾಜ್ಯ ಸರ್ಕಾರದಲ್ಲಿರುವುದಿಲ್ಲವೆಂಬುದು, ಸರ್ಕಾರದ ವೆಚ್ಚದಲ್ಲಿ ಸೂಪರ್‌ಸ್ಪೆಷಾಲಿಟಿ ಪದವಿ ಪಡೆದುಕೊಂಡ ತರುವಾಯ ರಾಜ್ಯದ ಸೇವೆಗಳನ್ನು ತ್ಯಜಿಸಲು ಅವರಿಗೆ ಇದು ಕಾರಣವಾಗಲಾರದೆ ಎಂಬುದು ಅರ್ಜಿದಾರರ ವಾದವಾಗಿದೆ. ಅರ್ಜಿದಾರರು ಸೂಪರ್‌ಸ್ಪೆಷಾಲಿಟಿ ಕೋರ್ಸಿಗೆ ಮುಂಚೆ ಸೇರ್ಪಡೆಯಾಗಿದ್ದರೂ ಸಹ, ಉನ್ನತ ಅರ್ಹತೆಯನ್ನು ಪಡೆದುಕೊಳ್ಳಲು ಪ್ರತಿ ನಿಯೋಜನೆ ಮೇಲೆ ಅವರು ಹೋದಾಗ ತಮ್ಮ ಉನ್ನತ ಅರ್ಹತೆಯ ಅಂಥ ಹುದ್ದೆಗಳನ್ನು ಪರಿಗಣಿಸಲು ರಾಜ್ಯ ಸರ್ಕಾರದಲ್ಲಿ ಲಭ್ಯವಿಲ್ಲವೆಂಬುದು ಅವರಿಗೆ ತಿಳಿದಿತ್ತು. ಅದನ್ನು ಪಡೆದುಕೊಂಡಿದ್ದಾಗ್ಯೂ, ಇಲಾಖೆಯ ಕೆಲಸ ಮಾಡುವುದು ಅವರ ಕರ್ತವ್ಯವಾಗಿದೆ. ಅನ್ಯಥಾ ಅಂಥ ವಾದವಾಗಿದ್ದರೂ ಸಹ, ರಾಜ್ಯ ಸರ್ಕಾರ ಪರಿಚಯಿಸಿದ ಯೋಜನೆಯ ದೃಷ್ಠಿಯಿಂದ ಅರ್ಜಿದಾರರ ಸೇವೆಗಳು ಅಗತ್ಯವಾಗಿದೆ ಮತ್ತು ಹಾಗೆಯೇ ರಾಜ್ಯ ಮತ್ತು 2ನೇ ಪ್ರತ್ಯರ್ಜಿದಾರರ ನಡುವೆ ಎಂ.ಓ.ಯು.ವನ್ನು ಮಾಡಿಕೊಳ್ಳಲಾಗಿದೆಯೆಂದು ನ್ಯಾಯಾಧಿಕರಣದ ಮುಂದೆ ಅದರ ಹೇಳಿಕೆಯನ್ನು ಪ್ಯಾರಾ–12 ರಲ್ಲಿ ಸರ್ಕಾರವು ಬಹಳ ಸ್ಪಷ್ಟವಾಗಿ ವಾದಿಸಿರುವುದನ್ನು ಅಂಗೀಕಾರಾರ್ಹ ಮಾಡಲಾಗಿದೆ. ಸರ್ಕಾರ ಐದು ಜಿಲ್ಲೆಗಳಲ್ಲಿ ಸದರಿ ಯೋಜನೆಯನ್ನು ಕ್ಯಾನ್ಸರ್‌ನಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಗುರುತಿಸುವ ಕಾರ್ಯವನ್ನು ಈಗಾಗಲೇ ಕಾರ್ಯಗತಗೊಳಿಸಲಾಗಿದ್ದು ಮತ್ತು

ಅಂಥ ಈ ಹುದ್ದೆಗಳಿಗೆ ಅರ್ಜಿದಾರರು, ಉನ್ನತ ಅರ್ಹತೆಗಳನ್ನು ಪಡೆದುಕೊಂಡಿರುವ ವೈದ್ಯರನ್ನು ಯೋಗ್ಯವೆಂದು ಭಾವಿಸಲಾಗಿದೆ. ಆದ್ದರಿಂದ, ತಮ್ಮ ಉನ್ನತ ಅರ್ಹತೆಗಳನ್ನು ಹೊಂದಿರುವುದಕ್ಕೆ ಸಮನಾದ ಹುದ್ದೆಗಳಿಲ್ಲವೆಂಬ ಅರ್ಜಿದಾರರ ವಾದದಲ್ಲಿ ಹುರುಳಿಲ್ಲವೆಂದು ಅದನ್ನು ತಿರಸ್ಕರಿಸಲಾಗಿದೆ.

16. ಇತರೇ ವಾದಕ್ಕೆ ಸಂಬಂಧಪಟ್ಟಂತೆ ರಾಜ್ಯವು, ಉನ್ನತ ಅರ್ಹತೆ ಪಡೆದುಕೊಳ್ಳಲು ಅವರಿಗೆ ಸಾಧ್ಯವಾಗುವಂತೆ ಉಚಿತ ವೆಚ್ಚಗಳಲ್ಲಿ ಈ ಅರ್ಜಿದಾರರನ್ನು ಕಳುಹಿಸುವುದಕ್ಕೆ ಸರ್ಕಾರವು ಉದ್ದೇಶಿಸಿರುವುದರಿಂದ ಅವರು ಬರೆದುಕೊಟ್ಟ ಮುಚ್ಚಳಿಕೆಯ ನಷ್ಟಭರ್ತಿಯ ನಿಬಂಧನೆಗಳಲ್ಲಿರುವಂತೆ ದಂಡವಾಗಿ ಪ್ರತಿಯೊಬ್ಬ ಅರ್ಜಿದಾರರಿಂದ 5.00 ಲಕ್ಷ ರೂ.ಗಳಿಗೆ ಮಾತ್ರ ಒತ್ತಾಯಿಸಿರುವುದನ್ನು ಸಹ ತಿರಸ್ಕರಿಸಬಹುದು, ತದನಂತರ ಕರ್ನಾಟಕ ರಾಜ್ಯದ ಆಸ್ಪತ್ರೆಗಳಲ್ಲಿ ಅಂಥ ಸೌಲಭ್ಯ ಅಗತ್ಯವಿರುವ ಬಡಜನರಿಗೆ ಸೇವೆ ಸಲ್ಲಿಸುವುದಕ್ಕೆ ಅನುಕೂಲ ಮಾಡಿಕೊಡುವುದು ಅಗತ್ಯವಾಗಿದೆ. ಆದರೆ, ಅರ್ಜಿದಾರರು, ಸರ್ಕಾರದಿಂದ ಉನ್ನತ ಅರ್ಹತೆಯನ್ನು ಪಡೆದುಕೊಳ್ಳುವುದಕ್ಕಾಗಿ ಅಂಥ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿಕೊಂಡಿದ್ದಾರೆ ಮತ್ತು ತಮ್ಮ ವೈಯಕ್ತಿಕ ಲಾಭಗಳಿಗಾಗಿ ಉನ್ನತ ಸ್ಥಾನ ಅಥವಾ ವೇತನ ಪಡೆದುಕೊಳ್ಳಲು ಅವರಿಗೆ ಸಾಧ್ಯವಾಗುವಂತೆ ಇತರೇ ಆಸ್ಪತ್ರೆಗಳು ಅಥವಾ ಸಂಸ್ಥೆಗಳಿಗೆ ಹೋಗುವ ಉದ್ದೇಶದೊಂದಿಗೆ ಮಾತ್ರ ರಾಜ್ಯದ ಸೇವೆಗಳನ್ನು ತ್ಯಜಿಸುತ್ತಿದ್ದಾರೆ. ಉನ್ನತ ಅರ್ಹತೆಯನ್ನು ಪಡೆದುಕೊಳ್ಳಲು ಸೇವೆಯಲ್ಲಿರುವ ಅಭ್ಯರ್ಥಿಗಳನ್ನು ಕಳುಹಿಸುವ ಸರ್ಕಾರದ ಉದ್ದೇಶ ಮತ್ತು ಧ್ಯೇಯೋದ್ದೇಶವನ್ನು, ಅರ್ಜಿದಾರರು ಯುಕ್ತವಾಗಿ ಅರ್ಥೈಸಿಕೊಂಡಿರುವುದಿಲ್ಲ ಮತ್ತು ಕಾರ್ಯಕ್ಕೆ ಅನುಸಾರವಾಗಿ ಸರ್ಕಾರಿ ಸೇವೆ ಸಲ್ಲಿಸುವುದು ಮತ್ತು ಕ್ಯಾನ್ಸರ್ ಹಾಗೂ ಇತರೇ ಅಂಥ ಕಾಯಿಲೆಗಳ ಅಂಥದೇ ರೋಗಗಳಿಂದ ಬಳಲುತ್ತಿರುವ ವಿವಿಧ ಆಸ್ಪತ್ರೆಗಳಲ್ಲಿರುವ ಬಡಜನರಿಗೆ ಸಹಾಯ ಮಾಡುವುದು. ಅದಲ್ಲದೇ, ರಾಜ್ಯ ಸರ್ಕಾರವು, ಅವರು ಉನ್ನತ ಅರ್ಹತೆಗಳನ್ನು ಪಡೆದುಕೊಂಡ ತರುವಾಯ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ತಮ್ಮ ಸೇವೆಗಳನ್ನು ನೀಡುವುದಕ್ಕೆ ಮಾತ್ರ

ಅರ್ಜಿದಾರರಿಗೆ ಸುಮಾರು 10.00 ರಿಂದ 12.00 ಲಕ್ಷ ರೂ.ಗಳ ಹಣದ ಭಾರೀ ಮೊತ್ತವನ್ನು ಖರ್ಚು ಮಾಡಲಾಗಿದೆ.

17. ಉನ್ನತ ಅರ್ಹತೆಗಳನ್ನು ಪಡೆದುಕೊಂಡ ಅರ್ಜಿದಾರರು, ಹದಿನೈದು ವರ್ಷಗಳ ಸೇವಾ ಅರ್ಹತೆಯನ್ನು ಪೂರ್ಣಗೊಳಿಸಿದ ತರುವಾಯ ಸ್ವಯಿಚ್ಛಾ ನಿವೃತ್ತಿ ಕೋರಿ ಅರ್ಜಿಗಳನ್ನು ಹಾಕಲು ಸಹ ಹಕ್ಕುಳ್ಳವರಾಗಿರುತ್ತಾರೆ ಮತ್ತು ಅಂಥ ಅರ್ಜಿಗಳನ್ನು ಅಂಗೀಕರಿಸಿದ್ದಲ್ಲಿ, ಅರ್ಜಿದಾರರು, ತಮ್ಮ ಮರಣದವರೆಗೆ ಪಿಂಚಣಿ ಪ್ರಯೋಜನಗಳನ್ನು ಪಡೆದುಕೊಳ್ಳಲು ಸಹ ಹಕ್ಕುಳ್ಳವರಾಗಿರುತ್ತಾರೆ ಮತ್ತು ತದನಂತರ ಅವರ ಪತಿ–ಪತ್ನಿಯರು ಸಹ ಪಿಂಚಣಿಗಾಗಿ ಹಕ್ಕುಳ್ಳವರಾಗಿರುತ್ತಾರೆ. ಸ್ವಇಚ್ಛಾ ನಿವೃತ್ತಿಯನ್ನು ಪಡೆದುಕೊಂಡ ತರುವಾಯ, ತಮ್ಮ ಆಯ್ಕೆಯ ಯಾವುದೇ ಖಾಸಗೀ ಆಸ್ಪತ್ರೆಗಳು ಅಥವಾ/ಮತ್ತು ಸ್ವಂತ ಕ್ಲಿನಿಕ್‌ಗಳನ್ನು ಪ್ರಾರಂಭಿಸಲು ಅಥವಾ ಯಾವುದೇ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸಲು ಅರ್ಜಿದಾರರಿಗೆ ಯಾವುದೇ ಅಡ್ಡಿ ಅಥವಾ ಅಡಚಣೆಯಾಗುವುದಿಲ್ಲ. ಈ ಸಂದರ್ಭಗಳಲ್ಲಿ, ಸರ್ಕಾರದ ವೆಚ್ಚದಲ್ಲಿ ಉನ್ನತ ಅರ್ಹತೆಗಳನ್ನು ಪಡೆದುಕೊಂಡ ತರುವಾಯ, ಅರ್ಜಿದಾರರು, ಕೆಲವೊಂದು ಮಾರ್ಗಗಳಲ್ಲಿ ಪ್ರಯೋಜನ ಪಡೆದುಕೊಂಡಿದ್ದಾರೆ ಮತ್ತು ಅವರು ಸಮಾಜಕ್ಕೆ ಸೇವೆ ಸಲ್ಲಿಸುವ ಬದಲು, ಉನ್ನತ ಅರ್ಹತೆಗಳನ್ನು ಪಡೆದುಕೊಳ್ಳಲು ಪ್ರತಿನಿಯೋಜನೆ ಮೇಲೆ ಅವರನ್ನು ಕಳುಹಿಸುವಂತೆ ಕೋರಿರುವ ಅವರ ಉದ್ದೇಶವು ಸರ್ಕಾರವನ್ನು ದುರುಪಯೋಗಪಡಿಸಿಕೊಳ್ಳುವ ಸಂಭವವಿದೆಯೆಂದು ನಾವು ಅಭಿಪ್ರಾಯಪಟ್ಟಿದ್ದೇವೆ.

18. ಬೋಧನಾ ಶುಲ್ಕವನ್ನು ಅಲ್ಲದೇ ಅವರಿಗೆ ವೇತನಗಳು ಮತ್ತು ಇತರೇ ಭತ್ಯೆಗಳನ್ನು ಪಾವತಿಸುವುದರ ಮೂಲಕ ಉನ್ನತ ಅರ್ಹತೆಗಳನ್ನು ಪಡೆದುಕೊಳ್ಳಲು ಅರ್ಜಿದಾರರನ್ನು ಕಳುಹಿಸುವಾಗ, ಸರ್ಕಾರವು ಈ ಅರ್ಜಿದಾರರ ಸ್ಥಳಗಳಲ್ಲಿ ಜನರಿಗೆ ಸೇವೆ ಸಲ್ಲಿಸಲು ಇತರೇ ವೈದ್ಯರನ್ನು ಆ ಹುದ್ದೆಗಳಿಗೆ ಅಗತ್ಯಪಡಿಸಲಾಗಿತ್ತೆಂಬುದನ್ನು ಸಹ ನಾವು ಗಮನಿಸಿದ್ದೇವೆ. ಸರ್ಕಾರವು, ಉನ್ನತ ಅರ್ಹತೆಗಳನ್ನು ಪಡೆದುಕೊಳ್ಳಲು ಅವರು ಪ್ರತಿನಿಯೋಜನೆಯಲ್ಲಿರುವಾಗ ಈ ಅರ್ಜಿದಾರರ ಸ್ಥಳಗಳಲ್ಲಿ ನಿಯೋಜಿಸಿದ್ದ ವೈದ್ಯರಿಗೂ ಸಹಾ ವೇತನಗಳನ್ನು

ಪಾವತಿಸಲಾಗಿದೆ. ಕಠಿಣ ಮನೋಭಾವದಿಂದ, ಸರ್ಕಾರವು, ತಮ್ಮ ಗೈರುಹಾಜರಿಯ ಅವಧಿಯಲ್ಲಿ ಈ ಅರ್ಜಿದಾರರ ಸ್ಥಳಗಳಲ್ಲಿ ನಿಯೋಜಿಸಿರುವ ವೈದ್ಯರಿಗೆ ವೇತನ ಪಾವತಿಸಿರುವುದನ್ನು ವಸೂಲಿ ಮಾಡಿಕೊಳ್ಳುವುದೂ ಸಹ ಅಗತ್ಯವಾಗಿದೆ.

19. ಯಾವುದೇ ದೃಷ್ಟಿಕೋನದಿಂದ ನೋಡಿದರೂ ಸಹಾ, ನಷ್ಟಭರ್ತಿಬಂಧ ಪತ್ರಗಳಲ್ಲಿ ಗೊತ್ತುಪಡಿಸಲಾದ ದಂಡವನ್ನು ಪಡೆದುಕೊಳ್ಳುವ ಮೂಲಕ ಬೇರೆ ಕಡೆ ಸೇರಿಕೊಳ್ಳಲು ಅವರಿಗೆ ಸಾಧ್ಯವಾಗುವಂತೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ಸರ್ಕಾರಕ್ಕೆ ಅವರು ನಿರ್ದೇಶನ ನೀಡುವಂತೆ ಕೋರಿರುವ ಹಕ್ಕಿಗೆ ಸಂಬಂಧಪಟ್ಟಂತೆ ಅರ್ಜಿದಾರರ ವಾದಗಳನ್ನು ಅಂಗೀಕರಿಸುವುದಕ್ಕೆ ಯಾವುದೇ ಕಾರಣಗಳು ನಮಗೆ ಕಂಡು ಬರುವುದಿಲ್ಲ. ನಷ್ಟಭರ್ತಿಬಂಧ ಪತ್ರದಲ್ಲಿ ಗೊತ್ತುಪಡಿಸಲಾದ ದಂಡ, ದಂಡದ ಸ್ವರೂಪದಲ್ಲಿದ್ದು, ಉನ್ನತ ಅರ್ಹತೆಗಳನ್ನು ಪಡೆದುಕೊಳ್ಳಲು ಅವರನ್ನು ಕಳುಹಿಸುವಾಗ ಈ ಅರ್ಜಿದಾರರ ಸ್ಥಳಗಳಲ್ಲಿ ನಿಯೋಜಿಸಿರುವ ವೈದ್ಯರಿಗೆ ವೇತನಗಳ ಪಾವತಿ ಸೇರಿದಂತೆ ಅರ್ಜಿದಾರರು ಉನ್ನತ ಅರ್ಹತೆಗಳನ್ನು ಪಡೆದುಕೊಳ್ಳುವುದಕ್ಕಾಗಿ ಖರ್ಚು ಮಾಡಿದ ಎಲ್ಲಾ ಹಣವನ್ನು ವಸೂಲಿ ಮಾಡಿಕೊಳ್ಳಲು ಸರ್ಕಾರವನ್ನು ಅನರ್ಹಗೊಳಿಸಲಾಗದು.

20. ಆದ್ದರಿಂದ, ನಮಗೆ, ಈ ಅರ್ಜಿಗಳಲ್ಲಿ ಯಾವುದೇ ಗುಣಾರ್ಹತೆಗಳೂ ಕಂಡುಬರುವುದಿಲ್ಲ. ತದನುಸಾರವಾಗಿ ಈ ಅರ್ಜಿಗಳನ್ನು ವಜಾಗೊಳಿಸಲಾಗಿದೆ.